ಕನ್ನಡ ಪೋಸ್ಟ್
ಇದು ಸುದ್ದಿ ವಿಳಾಸ
ಸಂಪಾದಕ : ಮಂಜು ಬನವಾಸೆ
KANNADA POST
ಕನ್ನಡ ದಿನ ಪತ್ರಿಕೆ Kannada Daily
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.01 | Issue. 158 | Pages. 2 | Date: 27-04-2025, SUNDAY RNI NO: KARKAN/2024/89601
ಸಂಪುಟ : 01 - ಸಂಚಿಕೆ : 158 - ಪುಟಗಳು : 2 - 27 ಏಪ್ರಿಲ್ 2025 ಭಾನುವಾರ Ph: 8762954248 ದರ : ₹1

# ಉಗ್ರರು ಇಸ್ಲಾಂ ಹೆಸರು ಹೇಳಲು ಯೋಗ್ಯರಲ್ಲ

## ಪಹಲ್ಗಾಮ್ ದಾಳಿ ಖಂಡಿಸಿದ ಬಾನು ಮುಷ್ತಾಕ್ | ಕಠಿಣ ಕ್ರಮಕ್ಕೆ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಭಾರತೀಯರನ್ನು ಹತ್ಯೆಗೈದವರು ಇಸ್ಲಾಂ ಅನುಯಾಯಿಗಳಲ್ಲ. ಅವರು ಇಸ್ಲಾಂ ಹೆಸರು ಹೇಳಲೂ ಯೋಗ್ಯರಲ್ಲ ಎಂದು ಹಿರಿಯ ಸಾಹಿತಿ ಬಾನು ಮುಷ್ತಾಕ್ ಹೇಳಿದರು.



ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬೆಂಗಳೂರಿನ ರಂಗಮಂಡಲ, ಹಾಸನ ಜಿಲ್ಲೆ ಕವಿ ಬಳಗ ವತಿಯಿಂದ ಹಮ್ಮಿಕೊಂಡಿದ್ದ ಕಾವ್ಯ ಸಂಸ್ಕೃತಿ ಯಾನ- ಜನರೆಡೆಗೆ ಕಾವ್ಯ 10ನೇ ಕವಿಗೋಷ್ಠಿಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಯಾವುದೇ ತಪ್ಪು ಮಾಡದ ಪ್ರವಾಸಿಗರನ್ನು ಕೊಂದಿರುವುದು ಘೋರ ಅಪರಾಧ. ಸತ್ತವರನ್ನು ಬದುಕಿಸಿಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ. ಆದರೆ ಸೂಕ್ತ ಕಾಲದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳುವುದು ಅನಿವಾರ್ಯ. ಈ ಪ್ರಕರಣ ಸಂಬಂಧ ಪ್ರಭುತ್ವ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಭಾರತೀಯ ಮುಸ್ಲಿಮರು ಶಾಂತಿ, ಸಹಬಾಳ್ವೆ ಬಯಸುತ್ತಾರೆ. ಪಹಲ್ಗಾಮ್‌ನಲ್ಲಿ ಉಗ್ರರು ನಮ್ಮ ಎದೆಗೆ ಗುಂಡಿಟ್ಟಿದ್ದಾರೆ. ಶಾಂತಿ ಪ್ರತಿಪಾದಿಸುವ ಭಾರತೀಯ ಮುಸ್ಲಿಮರು ನಿತ್ಯವೂ ಶೋಕ ಆಚರಿಸುವಂತಾಗಿದೆ. ಕೃತ್ಯ ಎಸಗಿದವರಿಗೆ ಶಿಕ್ಷೆಯಾಗಲಿ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಬಿಎಂಶ್ರೀ ಪ್ರತಿಷ್ಠಾನ ಅಧ್ಯಕ್ಷ ಡಾ. ಬೈರಮಂಗಲ ರಾಮೇಗೌಡ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಧರ್ಮ ಮತ್ತು ರಾಜಕಾರಣ ದಾರಿ ತಪ್ಪಿದ್ದು ಅವುಗಳನ್ನು ಸರಿದಾರಿಗೆ ಕರೆದೊಯ್ಯುವ ಕೆಲಸವನ್ನು ಕಾವ್ಯಗಳು ಮಾಡಬೇಕು. ಸಮಾಜದಲ್ಲಿ ನಿತ್ಯ ನಡೆಯುವ ಅಧ್ವಾನ, ಅನಾಚಾರ, ಭ್ರಷ್ಟಾಚಾರಗಳನ್ನು ಸೂಕ್ಷ್ಮವಾಗಿ ಕುಟುಕುವ ಕೆಲಸವನ್ನು ಕಾವ್ಯ ಮಾಡುತ್ತದೆ. ತಪ್ಪುಗಳನ್ನು ಮೊನಚಾದ ಬರಹಗಳ ಮೂಲಕ ಸಮಾಜಕ್ಕೆ ತಿಳಿಸುವ ಕೆಲಸವನ್ನು ಕವಿ ನಿರಂತರವಾಗಿ ಮಾಡುತ್ತಾನೆ. ಕವಿಯು ಅಂತರಂಗದ ಭಾವನೆಯನ್ನು ಬರಹ ರೂಪದಲ್ಲಿ ಪ್ರಕಟಿಸಿದಾಗ ಜೈಲು ಶಿಕ್ಷೆ ಅನುಭವಿಸಿದ ನಿದರ್ಶನಗಳು ಸಾಕಷ್ಟಿವೆ ಎಂದರು.

### ಹಾಸನ ಪ್ರೀತಿಗೆ ಋಣಿಯಾಗಿರುವೆ

ಸರ್ವಾಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಮಾಜಿ ರಾಜ್ಯಾಧ್ಯಕ್ಷ ನಲ್ಲೂರು ಪ್ರಸಾದ್ ಅವರು ತಮ್ಮ ಬಾಲ್ಯದ ದಿನಗಳು ಹಾಗೂ ತಂದೆಯನ್ನು ನೆನೆದು ಭಾವುಕರಾದರು.

ಹಾಸನ ನನ್ನ ಜನ್ಮ ಭೂಮಿ. ಶ್ರವಣಬೆಳಗೊಳ ಬದುಕು ಕಲಿಸಿದ ಪುಣ್ಯ ಕ್ಷೇತ್ರ ಎಂದು ಕಣ್ಣೀರು ಸುರಿಸಿದರು. ನಾನು ವೈದ್ಯನಾಗಬೇಕೆನ್ನುವುದು ತಂದೆಯ ಕನಸಾಗಿತ್ತು. ಅದಕ್ಕಾಗಿ ಅವರು ಸಾಕಷ್ಟು ಪ್ರಯತ್ನಪಟ್ಟರು. ಆದರೆ ಶ್ರವಣಬೆಳಗೊಳ ಪಿಯು ಕಾಲೇಜಿನ ಪ್ರಾಂಶುಪಾಲರು ನನ್ನ ಇಚ್ಛೆಯಂತೆ ಕಲಾ ವಿಭಾಗದಲ್ಲಿ ಪ್ರವೇಶ ಕೊಡಿಸಿದರು. ಅವರ ಆಶೀರ್ವಾದದಿಂದಲೇ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ ಕನ್ನಡಾಂಬೆಯ ಸೇವೆ ಮಾಡುವ ಅವಕಾಶ ದೊರೆಯಿತು. ಹಾಸನ ಜಿಲ್ಲೆಯ ಪ್ರೀತಿಗೆ ಎಂದೆಂದಿಗೂ ಋಣಿಯಾಗಿರುತ್ತೇನೆ ಎಂದರು.

ನೋಬೆಲ್ ಪ್ರಶಸ್ತಿ ಪುರಸ್ಕೃತ ಅಮೇರಿಕಾದ ಲೇಖಕ ಗೆಬ್ರಿಯಲ್ ಗಾರ್ಸಿಯಾ ಕೂಡ ವಿಶ್ವದಲ್ಲಿ ರಾಜಕಾರಣ ಮಾತ್ರವಲ್ಲದೆ ಧರ್ಮವೂ ಕಲುಷಿತಗೊಂಡಿದೆ ಎಂದು ಹೇಳಿದ್ದಾರೆ. ರಾಜಕಾರಣವನ್ನು ಸರಿದಾರಿಗೆ ತರಲು, ತಪ್ಪು ಮಾಡುವವರ ಕಿವಿ ಹಿಂಡಲು ಕಾವ್ಯ ನೆರವಾಗುತ್ತದೆ ಎಂದರು.

ವಾಮನ ರೂಪಿ ಕಾವ್ಯಕ್ಕೆ ತ್ರಿವಿಕ್ರಮ ಶಕ್ತಿ ಇದೆ. ಕಾವ್ಯ ಯಾವಾಗ ಪ್ರಾರಂಭವಾಯಿತೋ ಆಗಿನಿಂದಲೂ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಸರ್ಕಾರಿ ಪ್ರಾಯೋಜಿತ ಸಾಹಿತ್ಯದ ಕಾರ್ಯಕ್ರಮಗಳಲ್ಲಿ ಪ್ರತಿಭಾನ್ವಿತ ಕವಿಗಳಿಗೆ ವೇದಿಕೆ ಸಿಗುವುದಿಲ್ಲ. ಅದರಿಂದ ಮನನೊಂದ ಸಮಾನ ಮನಸ್ಕರೆಲ್ಲ ಒಟ್ಟಾಗಿ ಕಾವ್ಯ ಸಂಸ್ಕೃತಿ ಯಾನ ಸಂಘಟನೆ ರಚಿಸಿದ್ದು ಪ್ರತಿ ಜಿಲ್ಲೆಗೂ ಭೇಟಿ ನೀಡುತ್ತಿದ್ದೇವೆ. ಕವಿಗೋಷ್ಠಿ ಆಯೋಜನೆ ಮೂಲಕ ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ನಾಟಕಕಾರ ಡಾ. ಚಂದ್ರು ಕಾಳೇನಹಳ್ಳಿ ಮಾತನಾಡಿ, ಕನ್ನಡ ಸಾಹಿತ್ಯ ಹಲವು ಮಜಲುಗಳನ್ನು ಕಂಡಿದೆ. ಕವಿಯಾಗಲು ಕೇವಲ ಕನಸು ಕಂಡರೆ ಸಾಲುವುದಿಲ್ಲ. ಆತ ಕವಿತ್ವವನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಪಂಪನಿಂದ ಕುವೆಂಪು ವರೆಗೆ ಹಲವು ಕವಿಗಳನ್ನು ಕನ್ನಡ ನಾಡು ಕಂಡಿದೆ. ಆದರೆ ಯಾರೂ ಕೂಡ ರಾಜ ಪ್ರಭುತ್ವಕ್ಕೆ ಗುಲಾಮರಾಗಲಿಲ್ಲ. ನೊಂದವರ ದು:ಖ ದುಮ್ಮಾನಗಳನ್ನು ಬರವಣಿಗೆ ಮೂಲಕ ಸಮಾಜಕ್ಕೆ ಹೇಳಿದರು. ರಾಜಮನೆತನದ ಆಶ್ರಯ ಪಡೆದರೂ ಸಹ ಗುಲಾಮರಾಗಿರಲಿಲ್ಲ ಎಂದು ಹೇಳಿದರು.

ಬೂಕರ್ ಪ್ರಶಸ್ತಿ ಅಂತಿಮ ಪಟ್ಟಿಯಲ್ಲಿರುವ ಹಾರ್ಟ್ ಲ್ಯಾಂಪ್ ಕೃತಿಕಾರ್ತಿ ಬಾನು ಮುಷ್ತಾಕ್ ಅವರನ್ನು ಅಭಿನಂದಿಸಲಾಯಿತು. ವೇದಿಕೆ ಕಾರ್ಯಕ್ರಮದ ಬಳಿಕ ಎರಡು ಕವಿಗೋಷ್ಠಿಗಳು ನಡೆದವು.

ರಂಗ ಕಲಾವಿದ ಗೋವಿಂದೇಗೌಡ ಚನ್ನರಾಯಪಟ್ಟಣ, ಹೇಮಾವತಿ ಯೋಜನೆ ವಿಶೇಷ ಭೂಸ್ವಾಧಿನಾಧಿಕಾರಿ ವಿ. ಮಂಜುನಾಥ್, ರಂಗಕರ್ಮಿ ಉಲಿವಾಲ ಮೋಹನ್‌ಕುಮಾರ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಸದಸ್ಯ ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶ್‌ಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಉದಯರವಿ, ಲೇಖಕ ಹಾಡ್ಲಹಳ್ಳಿ ನಾಗರಾಜ್, ಚಲಂ, ಗುಂಡಣ್ಣ ಮತ್ತಿತರರಿದ್ದರು.

## ಶೆಟ್ಟಳ್ಳಮ್ಮ ಜಾತ್ರಾ ಮಹೋತ್ಸವ ಸಂಪನ್ನ



ಚನ್ನರಾಯಪಟ್ಟಣ: ಸಮೀಪದ ಶೆಟ್ಟಹಳ್ಳಿ ಗ್ರಾಮದಲ್ಲಿ ಶನಿವಾರ ಶೆಟ್ಟಳ್ಳಮ್ಮ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು.

ಶನಿವಾರ ಮುಂಜಾನೆಯಿಂದಲೇ ಶೆಟ್ಟಳ್ಳಮ್ಮ ದೇವಿಗೆ ಅಭಿಷೇಕ ಪುಣ್ಯಾಹ ಮಾಡಲಾಯಿತು. ಶೆಟ್ಟಳ್ಳಮ್ಮಮತ್ತು ಸಂತ್ಯಮ್ಮ ಉತ್ಸವ ಮೂರ್ತಿಗಳು ಹಾಗೂ ನಾಲ್ಕು ಸೋಮಗಳಿಗೂ ಅಲಂಕಾರ ಮಾಡಿ ದೇವಸ್ಥಾನದ ನಾಲ್ಕು ದಿಕ್ಕುಗಳಿಗೂ ಪ್ರದಕ್ಷಣೆ ಮಾಡಿದ ನಂತರ ಶೆಟ್ಟಳ್ಳಮ್ಮ ದೇವಿಯನ್ನು ಅಲಂಕರಿಸಿದ ರಥದಲ್ಲಿ ಕೂರಿಸಲಾಯಿತು. ನಂತರ ಗೋನೆತುಂಬಿದ ಬಾಳೆ ಕಂಬವನ್ನು ನೆಟ್ಟು ರಾಸು ಕೂಳು ಹಾಕಿದ ನಂತರ ಬಾಳೆ ಕಂಬವನ್ನು ಛೇದನ ಮಾಡಿ ಹರ್ಷೋದ್ಗಾರದೊಂದಿಗೆ ರಥವನ್ನು ದೇವಸ್ಥಾನದ ಸುತ್ತ ಒಂದು ಸುತ್ತು ಪ್ರದಕ್ಷಣೆ ಹಾಕಲಾಯಿತು. ಭಕ್ತರು ಹಣ್ಣು ಜವನ ಎಸೆದು ಭಕ್ತಿ ಸಮರ್ಪಿಸಿದರು.

## 10 ನೌಕರರು ಸರ್ವೋತ್ತಮ ಸೇವಾ ಪ್ರಶಸ್ತಿಗೆ ಆಯ್ಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯ ಸರ್ಕಾರವು ಅತ್ಯುನ್ನತ ಸೇವೆ/ಸಾಧನೆ ಮಾಡಿರುವ ಸರ್ಕಾರಿ ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡುವ ಯೋಜನೆ ರೂಪಿಸಿದ್ದು, 2023 ಸಾಲಿನ ಪ್ರಶಸ್ತಿಗೆ ಜಿಲ್ಲೆಯ ವಿವಿಧ ಇಲಾಖೆಗಳ 10 ಮಂದಿ ಅಧಿಕಾರಿ/ನೌಕರರು ಆಯ್ಕೆಯಾಗಿದ್ದಾರೆ.

ಜಿಲ್ಲಾ ಖಜಾನೆ ಇಲಾಖೆಯ ಪ್ರ.ದ.ಸ.ಪ್ರದೀಪ್ ಕುಮಾರ್ ಎನ್. ಹಿಮ್ಸ್ ಪ್ರಾಂಶುಪಾಲರಾದ ಡಾ.ಬಿ.ಸಿ.ರವಿಕುಮಾರ್, ಹಾಸನ ತಾಲೂಕು ಆರೋಗ್ಯಾಧಿಕಾರಿ ಡಾ.ವಿಜಯ್ ಬಿ.ಎಂ. ಸೇರಿದಂತೆ 10 ಮಂದಿ ಪ್ರಶಸ್ತಿಗೆ ಭಾಜನರಾಗಿದ್ದು, ಏ.28 ರಂದು ಬೆಳಗ್ಗೆ 10 ಗಂಟೆಗೆ ನಗರದ ಕಲಾಭವನದಲ್ಲಿ ನಡೆಯುವ ಜಿಲ್ಲಾ ಮಟ್ಟದ ನೌಕರರ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಹಾಗೂ ಇತರರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪ್ರಶಸ್ತಿ ಪುರಸ್ಕೃತರ ವಿವರ: ಕೃಷ್ಣಮೂರ್ತಿ ಟಿ.ಎಂ. ಎಇಇ ದೊಡ್ಡಕುಂಚ ನೀರಾವರಿ ಇಲಾಖೆ ಉಪ ವಿಭಾಗ ಹೊಳೆನರಸೀಪುರ. ಕೃಷ್ಣಮೂರ್ತಿ ಎಂ.ಆರ್.ತುರ್ತು ವಾಹನ ಚಾಲಕರು, ಶ್ರೀ ಜಯಚಾಮರಾಜೇಂದ್ರ ಆಸ್ಪತ್ರೆ ಅರಸೀಕೆರೆ. ರಂಗಸ್ವಾಮಿ ಎಸ್.ಎ. ಪಿಡಿಒ ಮೂಡಲಹಿಪ್ಪೆ ಗ್ರಾ.ಪಂ, ಹೊಳೆನರಸೀಪುರ. ಪ್ರದೀಪ್ ಕುಮಾರ್ ಎನ್.ಪ್ರ.ದ.



ಸ.ಜಿಲ್ಲಾ ಖಜಾನೆ ಇಲಾಖೆ, ಹಾಸನ. ಕೋದಂಡರಾಮಶೆಟ್ಟಿ, ಶಿರಸ್ತೇದಾರ್, ಬೇಲೂರು ತಾಲೂಕು ಕಚೇರಿ(ನಿಯೋಜನೆ ಮೇರೆಗೆ ಡಿಸಿ ಕಚೇರಿ, ಕಂದಾಯ ಶಾಖೆ, ಹಾಸನ), ಡಾ.ಬಿ.ಸಿ.ರವಿಕುಮಾರ್, ಪ್ರಾಂಶುಪಾಲರು, ಹಿಮ್ಸ್, ಹಾಸನ. ಡಾ.ವಿಜಯ್ ಬಿ.ಎಂ., ತಾಲೂಕು ಆರೋಗ್ಯಾಧಿಕಾರಿ, ಹಾಸನ, ಡಾ.ಎಂ.ಬಿ.ಸಂಜಯ್, ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಹಾಸನ. ಲಕ್ಷ್ಮಿ ಬಿ.ಎಸ್.ಶೀಘ್ರ ಲಿಪಿಕಾರರು, ಪೊಲೀಸ್ ಅಧೀಕ್ಷರ ಕಚೇರಿ, ಹಾಸನ ಹಾಗೂ ಪ್ರಕಾಶ್ ಕುಮಾರ್ ಯು.ಎಂ. ಕೃಷಿ ಅಧಿಕಾರಿ, ಅರೇಹಳ್ಳಿ ಇವರು ಪ್ರಶಸ್ತಿಗೆ ಪರಿಗಣಿಸಲ್ಪಟ್ಟಿದ್ದಾರೆ.

## ಸಂಭ್ರಮದ ಮಾರಮ್ಮ ದೇವಿ ಕೊಂಡೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪಟ್ಟಣದ ಗ್ರಾಮ ದೇವತೆ ಕೊಪ್ಪಲು ಮಾರಮ್ಮ ಅವರ ಸುಗ್ಗಿ ಹಾಗೂ ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಪಟ್ಟಣದ ಮಹೇಶ್ವರಿ ನಗರದಲ್ಲಿರುವ ಗ್ರಾಮದ ಆದಿ ದೇವತೆ ಕೊಪ್ಪಲು ಮಾರಮ್ಮ ಅವರು ಸುಗ್ಗಿ ಜಾತ್ರೆ 5 ದಿನಗಳಿಂದ ವಿವಿಧ ಧಾರ್ಮಿಕ ಕಾರ್ಯಗಳ ಮೂಲಕ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು. ಕಳೆದ ಮಂಗಳವಾರ ಗ್ರಾಮ ದೇವತೆ ಮಾರಮ್ಮ ಅವರಿಗೆ ದೇವತಾ ಪ್ರಾರ್ಥನೆಯೊಂದಿಗೆ ವಿಶೇಷ ಪಂಚಾಮೃತ ಅಭಿಷೇಕ ನಡೆಸಿ ಹೇಮಾವತಿ ನದಿಯಿಂದ ಗಂಗೆ ತರುವುದರ ಮೂಲಕ ಸುಗ್ಗಿ ಜಾತ್ರೆ ಆರಂಭವಾಯಿತು.



ಬುಧವಾರ ಅಮ್ಮನವರಿಗೆ ವಿಶೇಷ ದುರ್ಗಾ ಹೋಮ ನೆರವೇರಿಸಲಾಯಿತು.

ಶುಕ್ರವಾರ ಅಮ್ಮನವರನ್ನು ಮಹೇಶ್ವರಿ ನಗರ ಹಳೆಸಂತೆವೆರಿ ಬಡಾವಣೆಯಲ್ಲಿ ಊರಾಡಿಸಿ ದೇವಿಗೆ ಭಕ್ತರಿಂದ ಪೂಜೆ ನೆರವೇರಿಸಲಾಯಿತು. ರಾತ್ರಿ ವಿದ್ಯುತ್ ಅಲಂಕಾರದಲ್ಲಿ ಅಮ್ಮನವರನ್ನು ಪಟ್ಟಣದ ರಾಜಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು.

ಶುಕ್ರವಾರ ರಾತ್ರಿ ಸುಗ್ಗಿ ಕುಣಿತವಾದ ನಂತರ ಶನಿವಾರ ಬೆಳಗಿನ ಜಾವದಲ್ಲಿ ಕೊಂಡೋತ್ಸವ ನಡೆಸಲಾಯಿತು. ನೂರಾರು ಭಕ್ತರು ಕೊಂಡದಲ್ಲಿ ನಡೆದು ಹರಕೆ ಹಾಗೂ ಇಷ್ಟ ಭಕ್ತಿಯನ್ನು ನೇರವೇರಿಸಿದರು. ಪ್ರತಿದಿನ ಭಕ್ತರಿಗೆ ಅನ್ನದಾನ ಪ್ರಸಾದ ವಿತರಿಸಲಾಯಿತು.

ಶನಿವಾರ ರಾತ್ರಿ ಬೂತರಾಯ, ಕೆಂಚರಾಯ, ಕರಿರಾಯರಿಗೆ ಕೋಳಿ ಹಾಗೂ ಕುರಿಯನ್ನು ದೂಳ್‌ಮರಿ ಹರಕೆಯನ್ನು ಒಪ್ಪಿಸಿಲಾಯಿತು.

ಮಾರಮ್ಮ ದೇವಸ್ಥಾನದ ಆಡಳಿತ ಮಂಡಳಿಯಿಂದ ಅಚ್ಚುಕಟ್ಟಾಗಿ ಈ ಎಲ್ಲಾ ಧಾರ್ಮಿಕ ಸುಗ್ಗಿ ಕೊಂಡೋತ್ಸವ ನೇರವೆರಿಸಲಾಯಿತು.

## ಜಮೀನು ವ್ಯಾಜ್ಯ: ವ್ಯಕ್ತಿಯ ಕೊಲೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ತಾಲ್ಲೂಕಿನ ಉಮಾದೇವರಹಳ್ಳಿ ಗ್ರಾಮದಲ್ಲಿ ಶನಿವಾರ ಜಮೀನು ಮಾಲೀಕತ್ವ ಸಂಬಂಧದ ವಿವಾದ ವ್ಯಕ್ತಿಯೊಬ್ಬರ ಜೀವ ಬಲಿ ಪಡೆದಿದೆ.

ತಾಲ್ಲೂಕಿನ ತೇಜೂರು ಗ್ರಾಮದ ಕೆ.ಎಂ. ಪ್ರತಾಪ್ (43) ಮೃತರು. ತೊರಗರವಳ್ಳಿ ಗ್ರಾಮದ ಈರಯ್ಯ ಅವರ ಪುತ್ರರಾದ ಚಂದ್ರಶೇಖರ್, ಮೋಹನ್ ಹಾಗೂ ಟ್ರ್ಯಾಕ್ಟರ್ ಚಾಲಕ ಮೂವರು ಸೇರಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.



ಉಮಾದೇವರಹಳ್ಳಿ ಗ್ರಾಮದ ಸರ್ವೆ ನಂ. 179ರ 3 ಎಕರೆ ಜಮೀನನ್ನು ಕಳೆದ 30 ವರ್ಷಗಳ ಹಿಂದೆ ಬ್ಯಾಂಕ್ ಹರಾಜಿನಲ್ಲಿ ಮೃತ ಪ್ರತಾಪ್ ಅವರ ತಾಯಿ ಚನ್ನಮ್ಮ ಖರೀದಿಸಿದ್ದರು. ಇತ್ತೀಚೆಗೆ ಆ ಜಮೀನನ್ನು ಕೆ.ಎಂ. ಪ್ರತಾಪ್ ಹೆಸರಿಗೆ ಖಾತೆ ಮಾಡಿಕೊಳ್ಳಲಾಗಿತ್ತು. ಹಲವು ವರ್ಷಗಳಿಂದ ಪ್ರತಾಪ್ ಹಾಗು ಕುಟುಂಬಸ್ಥರೇ ಉಳುಮೆ ಮಾಡಿಕೊಂಡು ಬಂದಿದ್ದರು ಎನ್ನಲಾಗಿದೆ.

ತೊರಗರವಳ್ಳಿ ಗ್ರಾಮದ ಚಂದ್ರಶೇಖರ್ ಹಾಗು ಮೋಹನ್ ಜಮೀನು ತಮಗೆ ಸೇರಬೇಕೆಂದು ಆಗಾಗ ಗಲಾಟೆ ಮಾಡುತ್ತಿದ್ದರು. ಶನಿವಾರ ಬೆಳಿಗ್ಗೆ ಉಳುಮೆ ಮಾಡಲು ಈರಯ್ಯನ ಮಕ್ಕಳು ಟ್ರ್ಯಾಕ್ಟರ್ ಸಮೇತ ಬಂದಿದ್ದು ವಿಷಯ ತಿಳಿದು ಅಲ್ಲಿಗೆ ಪ್ರತಾಪ್, ತಾಯಿ ಚನ್ನಮ್ಮ, ಚಿಕ್ಕಪ್ಪನ ಮಗ ಬಸವರಾಜ, ಸ್ನೇಹಿತ ಹೇಮಂತ್ ಅವರು ಜಮೀನಿಗೆ ಬಂದು ವಾಗ್ವಾದ ನಡೆಸಿದ್ದಾರೆ.

ಎರಡೂ ಗುಂಪುಗಳ ನಡುವೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಮೂವರು ಸೇರಿ ಪ್ರತಾಪ್‌ನನ್ನು ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ವೈದ್ಯರು ಮೃತಪಟ್ಟಿರುವುದನ್ನು ಖಚಿತಪಡಿಸಿದರು. ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಲೆನಾಡು ರಕ್ಷಣಾ ಸೇನೆ ಉದ್ಘಾಟನೆ ಏ. 29ಕ್ಕೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏ.29 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮಲೆನಾಡು ರಕ್ಷಣಾ ಸೇನೆ ಉದ್ಘಾಟನೆ ಹಾಗೂ ಪದಗ್ರಹಣ ಕಾರ್ಯಕ್ರಮ ಜರುಗಲಿದೆ ಎಂದು ಸೇನೆ ಸಂಸ್ಥಾಪಕ ಡಾ.ಸಾಗರ್ ಜಾನೆಕೆರೆ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸಕಲೇಶಪುರ ತಾಲ್ಲೂಕು ಯಸಳೂರಿನ ತೆಂಕಲಗೂಡು ಬ್ರಹನ್ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ವಹಿಸುವರು ಎಂದರು.

ಉದ್ಘಾಟನೆಯನ್ನು ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಾಧೀಶ ಎನ್.ಸಂತೋಷ್ ಹೆಗ್ಡೆ ಅವರು ನೆರವೇರಸಲಿದ್ದಾರೆ. ಕಾರ್ಯಕ್ರಮದಲ್ಲಿ ಭಾರತೀಯ ಸೇವಾ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಎಂ. ರಾಮಚಂದ್ರ, ಅಖಿಲ ಭಾರತ ಅಯ್ಯಪ್ಪ ಸೇವಾ ಸಂಘದ ರಾಜ್ಯಾಧ್ಯಕ್ಷ ಉಮೇಶ್, ಯುವ ಕರ್ನಾಟಕ ರಾಜ್ಯಾಧ್ಯಕ್ಷ ರೂಪೇಶ್ ರಾಜಣ್ಣ, ಅಮರ್, ಬಸವರಾಜು, ಮುನಿಮಾರಪ್ಪ ಹಾಜರಿರುವರು. ಮುಖ್ಯ ಅತಿಥಿಗಳಾಗಿ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಆಲೂರು-ಸಕಲೇಶಪುರ ಸಿಮೆಂಟ್ ಮಂಜು, ಹಾಸನದ ಮಾಜಿ ಶಾಸಕ ಪ್ರೀತಂ ಜೆ.ಗೌಡ ಮೊದಲಾದವರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಲೆನಾಡು ರಕ್ಷಣಾ ಸೇನೆ ಜಿಲ್ಲಾಧ್ಯಕ್ಷ ಬಿ.ಎಸ್. ದರ್ಶನ್, ಜೆ. ಮಂಜುಧ್ರುವ್ ಉಲ್ಲೇನಹಳ್ಳಿ, ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರ, ಉಸ್ತುವಾರಿ ಚಂದ್ರಶೇಖರ್ ಇದ್ದರು.

## ಕಾಚೇನಹಳ್ಳಿ ಸೊಸೈಟಿಗೆ ಪ್ರಭಾಕರ್ ಅಧ್ಯಕ್ಷ



ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಕಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎ.ಎಂ. ಪ್ರಭಾಕರ್ ಹಾಗೂ ಉಪಾಧ್ಯಕ್ಷರಾಗಿ ಕೆ.ಎಂ. ಪ್ರಭಾಕರ್ ಅವಿರೋಧ ಆಯ್ಕೆಯಾಗಿದ್ದಾರೆ.

ಇಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆ ಘೋಷಿಸಲಾಯಿತು.

ನೂತನ ಅಧ್ಯಕ್ಷ ಪ್ರಭಾಕರ್ ಮಾತನಾಡಿ, ಕಾಚೇನಹಳ್ಳಿ ಸೊಸೈಟಿಯ ಅಭಿವೃದ್ಧಿಗಾಗಿ ಶಾಸಕ ಎಚ್.ಡಿ. ರೇವಣ್ಣ ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ ಎಂದರು.

ಜೆಡಿಎಸ್ ಮುಖಂಡರಾದ ಪುನರ್ವಿಕ ನವೀನ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಹೊನ್ನಶೆಟ್ಟಿಹಳ್ಳಿ ದೀಪು, ನಿರ್ದೇಶಕರಾದ ಎ.ಎಲ್. ದಿನೇಶ್, ಎ.ಎಲ್. ಅಶೋಕ್ ಕುಮಾರ್, ಕೆ.ಎನ್. ಮಂಜುನಾಥ್, ಕೆ.ಎಸ್. ಮೋಹನ್ ಕುಮಾರ್, ಸಾವಿತ್ರಮ್ಮ, ಮಂಜಮ್ಮ, ಕೃಷ್ಣೇಗೌಡ, ಸಿ.ಡಿ. ಮಂಜೇಗೌಡ ಇತರರಿದ್ದರು.

## ಸರ್ಕಾರಿ ಶಾಲೆಗೆ 8 ಗುಂಟೆ ಜಾಗ ದಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಸರ್ಕಾರಿ ಶಾಲೆಗಳ ಉಳಿವಿಗೆ ಮತ್ತು ಬೆಳವಣಿಗೆಗೆ ಪೂರಕವಾಗಲೆಂದು ತಾಲ್ಲೂಕಿನ ಗುಂಜೇವು ಗ್ರಾಮದ ನಿವೃತ್ತ ಸಹಾಯಕ ಕೃಷಿ ಅಧಿಕಾರಿ ಜಿ.ಕೆ.ಕೆಂಚೇಗೌಡ ಅವರು ಗುಂಜೇವು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 8 ಗುಂಟೆ ಜಮೀನನ್ನು ದಾನ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.



ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿರುವ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ದಾನಿ ಕೆಂಚೇಗೌಡರಿಂದ ನೊಂದಣಿ ಪತ್ರ ಸ್ವೀಕರಿಸಿ ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗೇಗೌಡ ಮಾತನನಾಡಿ, ಗ್ರಾಮೀಣ ಪ್ರದೇಶದ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಸೌಲಭ್ಯ ಕಲ್ಪಿಸುವ ಜತೆಗೆ ಮಾನವೀಯತೆ ಮೆರೆದಿದ್ದು, ಅವರ ಸೇವಾ ಕಾರ್ಯ ಶ್ಲಾಘನೀಯವಾಗಿದ್ದು, ಶಿಕ್ಷಣ ಇಲಾಖೆಯ ಪರವಾಗಿ ಅಭಿನಂದನೆ ಸಲ್ಲಿಸುತ್ತೇವೆ ಎಂದರು.

ಕೆಂಚೇಗೌಡರು ಕಣಕಟ್ಟೆ ಗ್ರಾಮದಲ್ಲಿಯೂ 100/120 ಅಳತೆಯ ನಿವೇಶನವನ್ನು ಶಾಲೆಗೆ ದಾನ ನೀಡಿದ್ದಾರೆ. ಜತೆಗೆ ಗುಂಜೇವು ಗ್ರಾಮದಲ್ಲಿ ಗ್ರಾಮಸ್ಥರ ಉಪಯೋಗಕ್ಕೆ ಪಿತ್ರಾರ್ಜಿತವಾಗಿ ನೀಡಿದ್ದ ದೊಡ್ಡ ಮನೆಯನ್ನು ದಾನ ನೀಡಿದ್ದರು.

ಈಗ ಆ ಸ್ಥಳದಲ್ಲಿ ಸಮುದಾಯ ಭವನ ನಿರ್ಮಿಸಿ ಬಳಕೆ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಗ್ರಾಮಸ್ಥರು ನೀಡಿದ್ದು, ವಿದ್ಯೆಗೆ ಹೆಚ್ಚಿನ ಮಹತ್ವ ನೀಡುವ ಇವರ ಗುಣವನ್ನು ಎಲ್ಲರೂ ರೂಢಿಸಿಕೊಂಡು ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಉಳಿವಿಗಾಗಿ ಸಹಕಾರ ನೀಡಬೇಕಿದೆ ಎಂದರು.

ಗುಂಜೇವು ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಮೇಶ್ ಜಿ.ಕೆ.,ಸಿಆರ್‌ಪಿ ಪದ್ಮಜಾ, ಮುಖಂಡರಾದ ಮಹೇಶ್ ಇತರರಿದ್ದರು.

## ಬೈಕೆರೆ ಗ್ರಾಮದಲ್ಲಿ ಷಣ್ಮುಖ ಅಂತ್ಯಕ್ರಿಯೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕಾಡಾನೆ ದಾಳಿಯಿಂದ ಶುಕ್ರವಾರ ಮೃತಪಟ್ಟ ಷಣ್ಮುಖ (43) ಅವರ ಅಂತ್ಯಕ್ರಿಯೆ ಶನಿವಾರ ತಾಲ್ಲೂಕಿನ ಬೈಕೆರೆ ಗ್ರಾಮದ ರುದ್ರಭೂಮಿಯಲ್ಲಿ ವೀರಶೈವ ಸಂಪ್ರದಾಯದಂತೆ ನೆರವೇರಿತು.

ಕಾಫಿ ಬೆಳೆಗಾರ ಷಣ್ಮುಖ ಕಾಫಿ ತೋಟಕ್ಕೆ ಹೋದಾಗ ಕಾಡಾನೆ ದಾಳಿಯಿಂದ ಮೃತಪಟ್ಟಿದ್ದರು. ಅರಣ್ಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳಕ್ಕೆ ಭೇಟಿ ನೀಡಬೇಕೆಂದು ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದ್ದರು.

ಸ್ಥಳಕ್ಕೆ ಭೇಟಿ ನೀಡಿದ ಸಂಸದ ಶ್ರೇಯಸ್ ಪಟೇಲ್ ಅವರು ಪ್ರತಿಭಟನಾಕಾರರ ಮನವೊಲಿಸಿ ಪರಿಸ್ಥಿತಿ ಶಾಂತಗೊಳಿಸಿದ್ದರು. ನಂತರ ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶನಿವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್ ಮತ್ತಿತರರಿದ್ದರು.

## ಭಯೋತ್ಪಾದನೆ ಖಂಡಿಸಿ ಮೌನ ಪ್ರತಿಭಟನೆ



ಸಕಲೇಶಪುರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿ ಖಂಡಿಸಿ ಮುಸ್ಲಿಮರು ಪ್ರತ್ಯೇಕವಾಗಿ ಮೌನ ಪ್ರತಿಭಟನೆ ನಡೆಸಿದರು. ಪಟ್ಟಣದ ಲಬಾಬಿನ್ ಮಸೀದಿ ಮುಂಭಾಗದಿಂದ ಉಪವಿಭಾಗಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ಪುರಸಭಾ ಮಾಜಿ ಅಧ್ಯಕ್ಷ ಯಾದ್ಗಾರ್ ಇಬ್ರಾಹಿಂ ಮಾತನಾಡಿ, ಕಾಶ್ಮೀರದ ಪಹಲ್ಗಾಮ್‌ನಲ್ಲಿ ಸಂಭವಿಸಿದ ಭಯೋತ್ಪಾದಕ ಕೃತ್ಯವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಇಂತಹ ಹಿಂಸಾತ್ಮಕ ಕ್ರಿಯೆಗಳಿಗೆ ಧರ್ಮವಿಲ್ಲ. ಇಸ್ಲಾಂ ಶಾಂತಿಯ ಧರ್ಮವಾಗಿದ್ದು, ನಿರಪರಾಧಿಗಳನ್ನು ಕೊಲ್ಲುವುದು ಭಯೋತ್ಪಾದನೆ ಮಾತ್ರ. ನಾವು ಭಯೋತ್ಪಾದಕರ ವಿರುದ್ಧದ ಧ್ವನಿ ಎತ್ತುತ್ತೇವೆ ಎಂದರು.

ಸಮಾಜದಲ್ಲಿ ಎಲ್ಲಾ ಧರ್ಮಗಳ ಮೌಲ್ಯಗಳು ಶಾಂತಿ, ಸಹಿಷ್ಣುತೆ, ಪರಸ್ಪರ ಗೌರವದ ಮೇಲೆ ಆಧಾರಿತವಾಗಿರಬೇಕು. ಇಂದು ಮುಸ್ಲಿಂ ಸಮುದಾಯ ಭಯೋತ್ಪಾದನೆ ವಿರುದ್ಧ ಎದ್ದು ನಿಂತಿರುವುದು, ದೇಶದ ಏಕತೆಗೆ ಸಾಕ್ಷಿಯಾಗಿದೆ. ಇಂತಹ ಚಟುವಟಿಕೆಗಳಿಗೆ ನಾವು ಯಾವುದೇ ರೀತಿಯ ಬೆಂಬಲ ನೀಡಲ್ಲ. ಸಕಲೇಶಪುರದ ಮುಸ್ಲಿಂ ಸಮಾಜ, ಭಯೋತ್ಪಾದನೆ ವಿರುದ್ಧ ತಮ್ಮ ಆಕ್ರೋಶವನ್ನು ಮೌನದ ಮೂಲಕ ವ್ಯಕ್ತಪಡಿಸಿದೆ. ನಾವು ಭಾರತದ ಸಮಗ್ರತೆ ಮತ್ತು ಶಾಂತಿಯ ಪರವಾಗಿದ್ದೇವೆ. ಈ ದೇಶದಲ್ಲಿ ಭಯೋತ್ಪಾದನೆಗೆ ಯಾವುದೇ ಸ್ಥಾನವಿಲ್ಲ ಎಂಬ ಸಂದೇಶವನ್ನು ಇಂದಿನ ಮೌನ ಮೆರವಣಿಗೆಯ ಮೂಲಕ ಕೊಡಲು ಯತ್ನಿಸಿದ್ದೇವೆ ಎಂದರು.

ವಿವಿಧ ಮಸೀದಿಗಳ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಉಪಸ್ಥಿತರಿದ್ದರು.

# ಮಲೇರಿಯಾ ಕಾಯಿಲೆ ಬಗ್ಗೆ ಇರಲಿ ಎಚ್ಚರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯಾವುದೇ ಜ್ವರ ಇದ್ದರೆ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮಲೇರಿಯಾ ತಪಾಸಣೆ ಉಚಿತ, ಸಂಪೂರ್ಣ ಚಿಕಿತ್ಸೆ ಪಡೆದು ಮಲೇರಿಯಾದಿಂದ ಮುಕ್ತರಾಗಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಹೆಚ್. ಅನಿಲ್ ಕುಮಾರ್ ತಿಳಿಸಿದರು.

ವಿಶ್ವ ಮಲೇರಿಯಾ ದಿನಾಚರಣೆ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಜಾಗೃತಿ ಕಾರ್ಯಕ್ರಮವನ್ನು ನಗರದ ಹೇಮಾವತಿ ಪ್ರತಿಮೆಯ ಬಳಿ ಹಸಿರು ನಿಶಾನೆ ತೋರಿಸಿ ಉದ್ಘಾಟಿಸಿ ಮಾತನಾಡಿದ ಅವರು, ಮನೆಯ ಸುತ್ತ-ಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನಿಂತ ನೀರು ಸೊಳ್ಳೆಗಳ ತವರು ಹಾಗಾಗಿ ಸೊಳ್ಳೆ ಪರದೆ ಬಳಸಿ, ಸ್ವಯಂ ರಕ್ಷಣಾ ವಿಧಾನ ಅನುಸರಿಸಿ, ಸೊಳ್ಳೆ ಕಡಿತದಿಂದ ಪಾರಾಗಿ, ಮಲೇರಿಯಾವನ್ನು ಕೊನೆಗೊಳಿಸಲು ಸಿದ್ಧರಾಗಿ ಎಂದರು.

ಸೊಳ್ಳೆಗಳ ಲಾರ್ವಾಗಳನ್ನು ತಿನ್ನುವ ಲಾರ್ವಾಹಾರಿ ಮೀನುಗಳಾದ ಗಪ್ಪಿ ಮತ್ತು ಗಾಂಬೂಷಿಯಾಗಳನ್ನು ಸೊಳ್ಳೆ ಉತ್ಪತ್ತಿ ತಾಣಗಳಾದ ಕೆರೆ, ಕಟ್ಟೆ, ನಿಂತ ಮಳೆ ನೀರು, ಕಲ್ಯಾಣಿ ಇತ್ಯಾದಿಗಳಲ್ಲಿ ಬಿಡುವುದರ ಮೂಲಕ ಸೊಳ್ಳೆ ಉತ್ಪತ್ತಿ ತಡೆಗಟ್ಟಿ ಎಂದರು.

ಆರೋಗ್ಯ ಇಲಾಖೆ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ. ಜಿ.ಎಸ್. ನಾಗಪ್ಪ ಮಾತನಾಡಿ, ಜಿಲ್ಲೆಯಲ್ಲಿ 2021ರ ನಂತರ ಸ್ಥಳೀಯವಾಗಿ ಮಲೇರಿಯಾ ಹರಡಿಲ್ಲವಾದರೂ ಸಹ, ಜಿಲ್ಲೆಗೆ ಬೇರೆ ರಾಜ್ಯ ಅಥವಾ ಮಲೇರಿಯಾ ಪೀಡಿತ ಜಿಲ್ಲೆಗಳಿಂದ ಆಗಮಿಸುವ ವಲಸೆ ಕಾರ್ಮಿಕರು/ ವಲಸಿಗರ ಮೂಲಕ ಜಿಲ್ಲೆಯಲ್ಲಿ ಮಲೇರಿಯಾ ಹರಡದಂತೆ ಹಾಗೂ ಮಲೇರಿಯಾ ರೋಗವು ಹಾಸನ ಜಿಲ್ಲೆಯಲ್ಲಿ ಮರು ಕಳಿಸದಂತೆ ಇಲಾಖೆಯಿಂದ ಹಮ್ಮಿಕೊಂಡಿರುವ ಎಲ್ಲಾ ನಿಯಂತ್ರಣ ಕ್ರಮಗಳಲ್ಲಿ ಪ್ರತಿಯೊಬ್ಬರು ಕೈ ಜೋಡಿಸಿ. ಮಲೇರಿಯಾ ನಿರ್ಮೂಲನೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಎಲ್ಲರೂ ಕೈ ಜೋಡಿಸಿ ಎಂದು ಹೇಳಿದರು.

ಪ್ರತಿವರ್ಷ ಏಪ್ರಿಲ್ 25 ರಂದು ವಿಶ್ವ ಮಲೇರಿಯಾ ದಿನ ಎಂದು ಆಚರಿಸಲಾಗುತ್ತದೆ. ಈ ವರ್ಷದ ಘೋಷಣೆ ಮಲೇರಿಯಾ ನಮ್ಮೊಂದಿಗೆ ಕೊನೆಗೊಳ್ಳುತ್ತದೆ, ಮರು ಹೂಡಿಕೆ ಮಾಡಿ, ಮರು ಕಲ್ಪನೆ ಮಾಡಿ, ಮರು ಉತ್ತೇಜನ ನೀಡೋಣ ಎಂದು ತಿಳಿಸಿದರು.




### ಜನ ಜಾಗೃತಿ

ಮಲೇರಿಯಾ ನಿಯಂತ್ರಣ ಕುರಿತು ವಿವಿಧ ಫಲಕಗಳನ್ನು ಪ್ರದರ್ಶಿಸುವುದರ ಮೂಲಕ, ಮಲೇರಿಯಾ ಕುರಿತ ಆಡಿಯೋ ಕ್ಲಿಪ್‌ಗಳನ್ನು ಪ್ರಸಾರ ಮಾಡುತ್ತಾ, ಕರಪತ್ರಗಳನ್ನು ವಿತರಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಇದಲ್ಲದೇ ಹಾಸನದ ನಗರ ಬಸ್ ನಿಲ್ದಾಣದಲ್ಲಿ ಮಲೇರಿಯಾ ನಿಯಂತ್ರಣ ಕುರಿತ ವಸ್ತು ಪ್ರದರ್ಶನವೊಂದನ್ನು ಕೆ.ಎಸ್.ಆರ್.ಟಿ.ಸಿ ಯವರ ಸಹಕಾರದೊಂದಿಗೆ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ನಗರ ಸಭೆಯ ಪದಾಧಿಕಾರಿಗಳು, ಪೊಲೀಸ್ ಇಲಾಖೆಯವರು ಹಾಗೂ ಹಾಗೂ ಹಾಸನ ತಾಲ್ಲೂಕಿನ ಎಲ್ಲಾ ಆರೋಗ್ಯ ಸಿಬ್ಬಂದಿ ಮತ್ತು ಜಿಲ್ಲಾ ಆರೋಗ್ಯ ಶಿಕ್ಷಣ ವಿಭಾಗದ ಸಿಬ್ಬಂದಿ ಹಾಜರಿದ್ದರು.

## ಅರಸೀಕೆರೆಯಲ್ಲಿ ಬಿರುಗಾಳಿ ಸಹಿತ ಜೋರು ಮಳೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರ ಸೇರಿದಂತೆ ತಾಲ್ಲೂಕಿನ ಅಲ್ಲಲ್ಲಿ ಶುಕ್ರವಾರ ರಾತ್ರಿ ಬಿರುಗಾಳಿ ಸಹಿತ ಸುರಿದ ಭಾರಿ ಮಳೆಗೆ ಜನಜೀವನ ಅಸ್ತವ್ಯಸ್ತಗೊಳ್ಳುವುದರ ಜೊತೆಗೆ ಅಪಾರ ಹಾನಿ ಸಂಭವಿಸಿದೆ.

ಬೇಸಿಗೆ ಬಿಸಿಲಿನ ತಾಪಕ್ಕೆ ನಲುಗಿದ್ದ ಜನತೆಗೆ ರಾತ್ರಿ ಸುರಿದ ಆಲಿಕಲ್ಲು ಸಹಿತ ಮಳೆ ಸ್ವಲ್ಪಮಟ್ಟಿಗೆ ವಾತಾವರಣವನ್ನು ತಂಪು ಮಾಡಿರುವುದು ಸಂತಸ ತರಿಸಿದ್ದರೆ, ಮಳೆಯ ಜೊತೆಗೆ ಬೀಸಿದ ಬಿರುಗಾಳಿ ಹಲವು ಮನೆಗಳ ಮೇಲ್ಛಾವಣಿಯನ್ನು ನೆಲಕ್ಕೆ ಬೀಳಿಸಿದೆ.

ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ. ದಿಢೀರ್ ಸುರಿದ ಮಳೆಯಿಂದ ಜನ ಜೀವನಕ್ಕೆ ತೊಂದರೆಯಾಗದಂತೆ ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸಲು ತಹಸೀಲ್ದಾರ್ ಸಂತೋಷ್ ಕುಮಾರ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಕಾರ್ಯಾಚರಣೆಗೆ ಇಳಿದಿದ್ದು, ತೊಂದರೆಗೆ ಸಿಲುಕಿರುವ ರೈತರು, ಜನರ ಆಗು ಹೋಗುಗಳಿಗೆ ಸ್ಪಂದಿಸುತ್ತಿದೆ. ಇದು ಸಹಜವಾಗಿಯೇ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ಮಳೆಯ ನಡುವೆಯೇ ನಗರದ ತಗ್ಗು ಪ್ರದೇಶದ ಬಡಾವಣೆಗಳಿಗೆ ಭೇಟಿ ನೀಡಿದ ತಹಸೀಲ್ದಾರ್ ಸಂತೋಷ್ ಕುಮಾರ್ ಮತ್ತು ನಗರಸಭೆ ಅಧಿಕಾರಿಗಳು ಮಳೆ ಗಾಳಿಯಿಂದ ಹಾನಿಗೊಳಗಾದ ಮನೆಗಳನ್ನು ಪರಿಶೀಲಿಸಿದರು. ಅಲ್ಲದೆ ನಿರಾಶ್ರಿತರಿಗೆ ಸೂಕ್ತ ಪರಿಹಾರ ದೊರಕಿಸಿ ಕೊಡುವ ಭರವಸೆ ನೀಡಿದರು.

## ಲಕ್ಕಮ್ಮ ದೇವಿ ಪ್ರತಿಷ್ಠಾಪನಾ ಮಹೋತ್ಸವ



ಹಾಸನ: ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ಹೊಂಗೆರೆ ಗ್ರಾಮದಲ್ಲಿ ಶ್ರೀ ಲಕ್ಕಮ್ಮ (ಲಕ್ಷ್ಮಿದೇವಿ) ವಿಗ್ರಹ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವ ಶುಕ್ರವಾರ ಭಕ್ತಿಪೂರ್ವಕವಾಗಿ ನಡೆಯಿತು.

ಗುರುವಾರದಿಂದಲೇ ವಿವಿಧ ಗ್ರಾಮದೇವರುಗಳ ಪ್ರಾರ್ಥನೆ, ಮಹಾಗಣಪತಿ ಪ್ರಾರ್ಥನೆ, ಪಿಂಡಿಕಾ ಸ್ಥಾಪನೆ, ಅಷ್ಟಬಂಧ ಪ್ರತಿಷ್ಠೆ, ನೇತ್ರೋನ್ಮಿಂತ ಪ್ರಾಣಪ್ರತಿಷ್ಠೆ, ಪೂರ್ಣಾಹುತಿ, ದೇವರಿಗೆ ಅಭಿಷೇಕ, ಮಹಾಬಲಿ ಪ್ರದಾನ ಮೊದಲಾದ ಕಾರ್ಯಕ್ರಮ ನಡೆದವು. ಶುಕ್ರವಾರ ವಿಗ್ರಹ ಪ್ರತಿಷ್ಠಾಪನೆ ಮತ್ತು ಕುಂಭಾಭಿಷೇಕ ಮಹೋತ್ಸವ ಜರುಗಿತು. ಇದೇ ವೇಳೆ ದೇವಾಲಯಕ್ಕೆ ನೂತನ ಕಳಶ ಅಳವಡಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್ ಅವರು ಭಾಗಿಯಾಗಿ ದೇವರಿಗೆ ಮಂಡಿಯೂರಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಗ್ರಾಮದ ಎಲ್ಲರೂ ಇದೇ ರೀತಿಯ ಶಾಂತಿ, ಸಾಮರಸ್ಯ, ಸಹಬಾಳ್ವೆಯಿಂದ ಜೀವನ ನಡೆಸುವಂತೆ ಸಲಹೆ ನೀಡಿದರು.

ಇದಕ್ಕೂ ಮುನ್ನ ದೇವಾಲಯದ ಮುಂದೆ ಲಕ್ಷ್ಮಿದೇವಿ ವಿಗ್ರಹ ಇಟ್ಟು ಊರಿನ ಎಲ್ಲರೂ ಪೂಜೆ ಸಲ್ಲಿಸಿದರು. ಧಾರ್ಮಿಕ ಕಾರ್ಯಕ್ರಮದಲ್ಲಿ ಊರಿನ ಮಹಿಳೆಯರು ಪೂರ್ಣಕುಂಭ ಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಡೊಳ್ಳು ಕುಣಿತ, ತಮಟೆ ಕಲಾವಿದರ ಕುಣಿತ ಗಮನ ಸೆಳೆಯಿತು.ಆಗಮಿಸಿದ್ದ ಎಲ್ಲ ಭಕ್ತರಿಗೂ ಪ್ರಸಾದ ವಿನಿಯೋಗ ಮಾಡಲಾಯಿತು. ಹುಡಾ ಮಾಜಿ ಅಧ್ಯಕ್ಷ ಕೃಷ್ಣಕುಮಾರ್ ಮತ್ತಿತರರು ಇದ್ದರು.

## ಪಿಸಿ/ಪಿಎನ್‌ಡಿಟಿ ಪರಿಣಾಮಕಾರಿ ಅನುಷ್ಠಾನಕ್ಕೆ ಸಹಕಾರ ಅಗತ್ಯ

ಹಾಸನ: ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ಮಾಡುವುದು ಕಾನೂನು ಬಾಹಿರವಾಗಿದ್ದು ಅದನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಪಿ.ಸಿ ಪಿ.ಎನ್.ಡಿ.ಟಿ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಎಲ್ಲರ ಸಹಕಾರ ಅತ್ಯಗತ್ಯ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಹೆಚ್. ಅನಿಲ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ನಡೆದ ಪಿಸಿ/ಪಿಎನ್‌ಡಿಟಿ ಸಲಹಾ ಸಮಿತಿ ಹಾಗೂ ಡಿಐಎಂಸಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕಾಯ್ದೆಯ ಕುರಿತು ಹೆಚ್ಚಿನ ಅರಿವು



ಮೂಡಿಸಲು ಗ್ರಾಮೀಣ ಮಟ್ಟದಲ್ಲಿ ಈಗಾಗಲೇ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಗೃಹಿಣಿಯರಿಗೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳು ಹಾಗೂ ತಾಯಂದಿರ ಸಭೆಗಳಲ್ಲಿ ಈಗಾಗಲೇ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರೇಡಿಯೋ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಡಾ. ಭಾರತಿ ರಾಜಶೇಖರ್, ಡಾ. ಎ. ಸಾವಿತ್ರಿ, ವಕೀಲರಾದ ರವಿ ಶಂಕರ್, ಡಾ. ಸಚ್ಚಿನ್, ಡಾ. ಲಕ್ಷ್ಮಿಕಾಂತ್, ಕೆ.ಟಿ ಜಯಶ್ರೀ, ಮಮತ ಶಿವು, ಡಾ. ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

# ಹಿಂದುಗಳ ಹತ್ಯೆ ಖಂಡಿಸಿ ಸ್ವಯಂ ಪ್ರೇರಿತ ಬಂದ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಹಿಂದುಗಳ ನರಮೇಧ ಖಂಡಿಸಿ ಪಟ್ಟಣದಲ್ಲಿ ಸ್ವಯಂ ಪ್ರೇರಿತರಾಗಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಪ್ರತಿಭಟಿಸಲಾಯಿತು.

ಎಲ್ಲಾ ಹಿಂದುಪರ ಸಂಘಟನೆಗಳು ಒಗ್ಗೂಡಿ ಪಕ್ಷಾತೀತ ಹಾಗೂ ಜ್ಯಾತ್ಯಾತೀತವಾಗಿ ಪ್ರತಿಭಟನೆ ನಡೆಸಿ ಹಿಂದುಗಳಿಗೆ ಸೂಕ್ತ ರಕ್ಷಣೆಗೆ ಸರ್ಕಾರಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಾಲ್ಲೂಕು ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಪಹಲ್ಗಾವ್‌ನಲ್ಲಿ ಉಗ್ರಗಾಮಿಗಳಿಂದ ಹಿಂದುಗಳ ಹತ್ಯೆಯಾಗಿದ್ದು ಅತ್ಯಂತ ಖಂಡನೀಯ. ಎದೆಕೊಟ್ಟು ಹೋರಾಡದೇ ಅಮಾಯಕ ಸ್ಥಿತಿಯಲ್ಲಿ ಯಾತ್ರಿಗಳಾಗಿ ಬಂದವರ ಮೇಲೆ ಬಂದೂಕು ಪ್ರಯೋಗ ಮಾಡಿರುವುದು ನಾಚಿಕೆಗೇಡಿನ



ಸಂಗತಿ. ಪೆಹಲ್ಗಾವ್ ಉಗ್ರರ ಅಟ್ಟಹಾಸಕ್ಕೆ 26 ಹಿಂದುಗಳನ್ನು ಧರ್ಮ ಕೇಳಿ ಕೊಲ್ಲಲಾಗಿದೆ. ಬಹುತೇಕರು ಗಾಯಗೊಂಡಿದ್ದಾರೆ. ಇವರುಗಳಿಗೆ ಸಾಂತ್ವನ ಹೇಳುವ ಕಾರ್ಯ ಇನ್ನಷ್ಟು ಕಾಳಜಿ ವಹಿಸಬೇಕಿದೆ ಎಂದರು.

ವಕ್ಫ್ ಕಾಯ್ದೆ ಜಾರಿಯಾದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ರಾಜ್ಯದಲ್ಲೂ ಹಿಂದುಗಳ ಮೇಲೆ ದೌರ್ಜನ್ಯ ನಡೆದಿದೆ. ಪಕ್ಕದ ರಾಷ್ಟ್ರ ಬಾಂಗ್ಲಾದಲ್ಲೂಹಿಂದೂಗಳ ನೆತ್ತರು ಹರಿಸಿದ್ದಾಗಿದೆ. ಪರೀಕ್ಷೆಯೊಂದಕ್ಕೆ ಪ್ರವೇಶ ನೀಡಲು ಜನಿವಾರ ತೆಗೆಸಿ ಹಿಂದುಗಳ ಧರ್ಮಾಚರಣೆಗೆ ಅಡ್ಡಿಪಡಿಸಲಾಗಿದೆ. ಇಂತಹ ಹೇಯ್ಯ ಕೃತ್ಯಗಳು ಕೊನೆಗಾಣಬೇಕು. ಹಿಂದುಗಳ ಸಂರಕ್ಷಣೆಗೆ ಸೂಕ್ತ ಕಾರ್ಯಕ್ರಮ ರೂಪಿಸಬೇಕೆಂದು ಒತ್ತಾಯಿಸಿ ಸಾವಿರಾರು ಹಿಂದೂಪರ ಸಂಘಟಕರು ಹಾಗೂ ನಾನಾ ಸಂಘ, ಸಂಸ್ಥೆಗಳ ಮುಖಂಡರು ತಹಸೀಲ್ದಾರ್ ರೇಣುಕುಮಾರ್‌ಗೆ ಮನವಿ ಪತ್ರ ಸಲ್ಲಿಸಿದರು. ಮನವಿ ಸ್ವೀಕರಿಸಿ ಸರ್ಕಾರದ ಹಂತಕ್ಕೆ ಕಳುಹಿಸುವುದಾಗಿ ತಹಸೀಲ್ದಾರ್ ತಿಳಿಸಿದರು.

ಪಟ್ಟಣದ ಮಸೀದಿಗಳಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಂ ರು ಕಾಶ್ಮೀರದಲ್ಲಿ ಉಗ್ರರು ಅಮಾಯಕರ ಮೇಲೆ ದಾಳಿ ಮಾಡಿರುವ ಕೃತ್ಯವನ್ನು ಖಂಡಿಸಿದರು. ಮೃತರಾದವರ ಆತ್ಮಕ್ಕೆ ಶಾಂತಿಕೋರಿ, ಮೌನ ಪ್ರತಿಭಟನೆ ನಡೆಸಿದರು.

ಪಟ್ಟಣದ ಗಾಂಧೀವೃತ್ತದಲ್ಲಿ ಹಿಂದೂಪರ ಸಂಘಟಕರು ಉಗ್ರರ ಪ್ರತಿಕೃತಿಯನ್ನು ಧಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಹಿಂದೂಸ್ಥಾನ ಜಿಂದಾಬಾದ್ ಘೋಷಣೆ ಮೊಳಗಿಸಿ, ಪ್ರಮುಖ ಬೀದಿ ಹಾಗೂ ವೃತ್ತಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಔಷದಿ ಅಂಗಡಿ, ಆಸ್ಪತ್ರೆ, ಚಿಕಿತ್ಸಾ ಲಯಗಳು ಹೊರತುಪಡಿಸಿ ಉಳಿದಂತೆ ಎಲ್ಲವನ್ನೂ ವರ್ತಕರು ಸ್ವಯಂ ಪ್ರೇರಿತರಾಗಿ ಬಂದ್ ಮಾಡಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಪ್ರತ್ಯೇಕ ಪ್ರಕರಣ: 6 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಳೆನರಸೀಪುರ ಹಾಗೂ ಶ್ರವಣಬೆಳಗೊಳ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಪ್ರಕರಣದಲ್ಲಿ 6.23 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ನಗದು ಕಳವು ಮಾಡಲಾಗಿದೆ.

ಹೊಳೆನರಸೀಪುರ ಸ್ಲಂ ಬೋರ್ಡ್‌ನ ಜ್ಯೋತಿ ಎಂಬುವರ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 93 ಲಕ್ಷ ರೂ. ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣ ಕದ್ದಿದ್ದಾರೆ. ಜ್ಯೋತಿ ಹಾಸನದ ಎಸ್‌ಪಿಜಿ ಕಂಪನಿಯಲ್ಲಿ ಆಪರೇಟರ್ ಆಗಿ ಕೆಲಸ ಮಾಡಿಕೊಂಡಿದ್ದಾರೆ. ಏ. 24 ರಂದು ಮನೆಗೆ ಬೀಗ ಹಾಕಿ ಕೆಲಸಕ್ಕೆ ಬಂದಿದ್ದ ಅವರು ಮಾರನೇ ದಿನ ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬಾಗಿಲು ಮುರಿದು ಒಳ ಪ್ರವೇಶಿಸಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 6 ಗ್ರಾಂ ತೂಕದ ಒಂದು ಜೊತೆ ಚಿನ್ನದ ಹ್ಯಾಂಗಿಂಗ್ಸ್, 5 ಗ್ರಾಂ ತೂಕದ ಚಿನ್ನದ ಓಂದು ಜೊತೆ ಓಲೆ, 3 ಗ್ರಾಂ ತೂಕದ ಒಂದು ಜೊತೆ ಫ್ಯಾನ್ಸಿ ಓಲೆ, 3 ಗ್ರಾಂ ತೂಕದ ಚಿನ್ನದ ಒಂದು ಉಂಗುರ ಹಾಗು 60 ಗ್ರಾಂ ತೂಕದ ಒಂದು ಜೊತೆ ಬೆಳ್ಳಿ ಕಾಲು ಚೈನು ಕದ್ದಿದ್ದಾರೆ. ಹೊಳೆನರಸೀಪುರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆ ಬಾಗಿಲು ಮುರಿದು 5 ಲಕ್ಷ ರೂ. ಬೆಲೆಯ ಚಿನ್ನಾಭರಣ ಹಾಗು 30 ಸಾವಿರ ರೂ. ನಗದು ಕದ್ದಿರುವ ಘಟನೆ ಶ್ರವಣಬೆಳಗೊಳ ಹೋಬಳಿ ಉತ್ತೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್ 27

1986: ಪ್ರಣಬ್ ಮುಖರ್ಜಿ ಅವರನ್ನು ಕಾಂಗ್ರೆಸ್ ಪಕ್ಷದಿಂದ 6 ವರ್ಷಗಳ ಕಾಲ ಹೊರಹಾಕಲಾಯಿತು. ಇದು ಭಾರತದ ರಾಜಕೀಯದಲ್ಲಿ ಒಂದು ಗಮನಾರ್ಹ ಘಟನೆಯಾಗಿತ್ತು.

1993: ರಾಷ್ಟ್ರೀಯ ಮಹಿಳಾ ಕೋಶ (National Mahila Kosh) ಸ್ಥಾಪನೆಯಾಯಿತು. ಇದು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರದಿಂದ ರಚಿತವಾದ ಸಂಸ್ಥೆಯಾಗಿದೆ.

1997: ಲಾಲೂ ಪ್ರಸಾದ್ ಯಾದವ್ ಅವರ ವಿರುದ್ಧ ಸಿಬಿಐ 950 ಕೋಟಿ ರೂ. ಗಾಳಿಮಾತು ಹಗರಣ (Fodder Scam) ಪ್ರಕರಣದಲ್ಲಿ ಕಾನೂನು ಕ್ರಮ ಜರುಗಿಸಲು ನಿರ್ಧರಿಸಿತು.

#### ಪ್ರಸಿದ್ಧ ವ್ಯಕ್ತಿಗಳ ಜನ್ಮ

1593: ಮುಮ್ತಾಜ್ ಮಹಲ್, ಮೊಘಲ್ ಚಕ್ರವರ್ತಿ ಶಾಹಜಹಾನ್ ರ ಪತ್ನಿ ಮತ್ತು ತಾಜ್‌ಮಹಲ್‌ಗೆ ಸ್ಫೂರ್ತಿಯಾದ ಮಹಾರಾಣಿ.

1857: ಜಾಮ್‌ಶೆಡ್ಜಿ ಫ್ರಾಮ್‌ಜಿ ಮದನ್, ಭಾರತದ ಚಲನಚಿತ್ರ ಉದ್ಯಮದ ಪ್ರವರ್ತಕರಲ್ಲಿ ಒಬ್ಬರಾದ ಥಿಯೇಟರ್ ಮತ್ತು ಚಿತ್ರ ನಿರ್ಮಾಪಕ.

1912: ಝೊಹ್ರಾ ಸೆಹಗಲ್ ಭಾರತದ ಐಕಾನಿಕ್ ನಟಿ, ನೃತ್ಯಗಾರ್ತಿ ಮತ್ತು ಕೊರಿಯೋಗ್ರಾಫರ್. 1920: ಮಣಿಭಾಯ್ ಭೀಮ್‌ಭಾಯ್ ದೇಸಾಯಿ, ಮಹಾತ್ಮ ಗಾಂಧಿಯವರ ಸಹಚರರಾಗಿದ್ದ ಸಾಮಾಜಿಕ ಕಾರ್ಯಕರ್ತ ಮತ್ತು ಗ್ರಾಮೀಣಾಭಿವೃದ್ಧಿಯ ಪ್ರವರ್ತಕ.

1929: ಜಯದೇವ ದೇಸಾಯಿ ಯೋಗ ಗುರು, ಸಂಶೋಧಕ ಮತ್ತು ದಿ ಯೋಗ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ.

1941: ದಿಲೀಪ್ ಕುಮಾರ್ ಚಕ್ರವರ್ತಿ, ಭಾರತದ ಪ್ರಾಚೀನ ಕಬ್ಬಿಣದ ಬಳಕೆ ಮತ್ತು ಪೂರ್ವ ಭಾರತದ ಪುರಾತತ್ವ ಶಾಸ್ತ್ರದಲ್ಲಿ ಸಂಶೋಧನೆಗೆ ಹೆಸರಾದ ಪುರಾತತ್ವಜ್ಞ.

1948: ಪ್ರಸನ್ನ ಕುಮಾರ್ ಪಟಸಾನಿ, ಒಡಿಶಾದ ರಾಜಕಾರಣಿ ಮತ್ತು ಭುವನೇಶ್ವರದಿಂದ ಲೋಕಸಭಾ ಸಂಸದ.

1957: ಫೈಸಲ್ ಸೈಫ್, ಭಾರತೀಯ ಚಲನಚಿತ್ರ ನಿರ್ದೇಶಕ.

1969: ಎ.ಆರ್. ಮುರುಗದಾಸ್, ತಮಿಳು, ತೆಲುಗು ಮತ್ತು ಹಿಂದಿ ಚಿತ್ರರಂಗದಲ್ಲಿ ಆಕ್ಷನ್ ಚಿತ್ರಗಳಿಗೆ ಹೆಸರಾದ ಚಲನಚಿತ್ರ ನಿರ್ದೇಶಕ.

1972: ಹರೀಶ್ ರಾವತ್, ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್‌ನ ಹಿರಿಯ ನಾಯಯೆಟಕ್ಷಿ.

#### ಪ್ರಸಿದ್ಧ ವ್ಯಕ್ತಿಗಳ ಮರಣ

1930: ಟಿ. ಕೆ. ಮಾಧವನ್, ಕೇರಳದ ಸಾಮಾಜಿಕ ಸುಧಾರಕ, ಪತ್ರಕರ್ತ ಮತ್ತು ವೈಕಂ ಸತ್ಯಾಗ್ರಹದ ನಾಯಕ.

1960: ರಾಜಶೇಖರ್ ಬಸು (ಪರಶುರಾಮ್), ಬಂಗಾಳಿ ಲೇಖಕ, ಹಾಸ್ಯಕಾರ ಮತ್ತು ರಸಾಯನಶಾಸ್ತ್ರಜ್ಞ. ಅವರು 20ನೇ ಶತಮಾನದ ಬಂಗಾಳಿ ಸಾಹಿತ್ಯದ ಶ್ರೇಷ್ಠ ಹಾಸ್ಯಕಾರರೆಂದು ಪರಿಗಣಿತರಾಗಿದ್ದಾರೆ.

2007: ಫಿರೋಜ್ ಖಾನ್, ಬಾಲಿವುಡ್‌ನ ಪ್ರಸಿದ್ಧ ನಟ ಮತ್ತು ನಿರ್ಮಾಪಕ.

2017: ವಿನೋದ್ ಖನ್ನಾ, ಬಾಲಿವುಡ್‌ನ ಖ್ಯಾತ ನಟ ಮತ್ತು ರಾಜಕಾರಣಿ.

# ಭಟ್ಕಳದ ಪಾಕಿಸ್ತಾನಿ ನಂಟು: ಪಹಲ್ಗಾಮ್ ದಾಳಿ ನಂತರ ಕಗ್ಗಂಟು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಭಟ್ಕಳವು ರಾಷ್ಟ್ರೀಯ ಹೆದ್ದಾರಿ 66 ಮತ್ತು ಕೊಂಕಣ ರೈಲ್ವೆಯ ಸಂಪರ್ಕ ಕೊಂಡಿಯಾದ ಆಯಕಟ್ಟಿನ ಸ್ಥಳ. ಇದು ಹಿಂದಿನಿಂದಲೂ ಸಮುದ್ರ ವ್ಯಾಪಾರಕ್ಕೆ ಅನುಕೂಲವಾಗಿತ್ತು. ಈ ಪ್ರದೇಶವು ಅರಬ್ ವ್ಯಾಪಾರಿಗಳಿಂದ ಪ್ರಭಾವಿತಗೊಂಡ ನವಾಯತ್ ಮುಸ್ಲಿಮರ ಸಮುದಾಯವನ್ನು ಆಕರ್ಷಿಸಿತು. ಈ ಸಮುದಾಯವು ಸಮುದ್ರ ಮಾರ್ಗದಿಂದ ಪಾಕಿಸ್ತಾನದ ಕರಾಚಿ ಸೇರಿದಂತೆ ಅನೇಕ ಭಾಗಗಳೊಂದಿಗೆ ಸಂಪರ್ಕದಲ್ಲಿತ್ತು.

1947ರ ವಿಭಜನೆಯ ನಂತರ ಭಟ್ಕಳ ಮತ್ತು ಸುತ್ತಮುತ್ತಲಿನ ಕೆಲವು ಕುಟುಂಬಗಳು ಧಾರ್ಮಿಕ ಮತ್ತು ಆರ್ಥಿಕ ಕಾರಣಗಳಿಂದ ಪಾಕಿಸ್ತಾನಕ್ಕೆ ವಲಸೆ ಹೋಗಿ ಮುಖ್ಯವಾಗಿ ಕರಾಚಿಯಲ್ಲಿ ನೆಲೆಯೂರಿದರು. ಈ ಮೂಲಕ ಉಂಟಾದ ಕುಟುಂಬ ಸಂಬಂಧಗಳು ಮುಂದುವರಿದಂತೆಯೇ ಇಂದಿಗೂ ಇವೆ.




ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪಟ್ಟಣವಾದ ಭಟ್ಕಳವು ತನ್ನ ವಿಶಿಷ್ಟ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿಂದಾಗಿ ಪಾಕಿಸ್ತಾನದೊಂದಿಗೆ ಗಮನ ಸೆಳೆದಿದೆ. ಈ ಸಂಬಂಧಗಳು ಮುಖ್ಯವಾಗಿ ಐತಿಹಾಸಿಕ ವಲಸೆ, ವ್ಯಾಪಾರ ಮತ್ತು ಇತ್ತೀಚಿನ ದಿನಗಳಲ್ಲಿ ವೈವಾಹಿಕ ಸಂಬಂಧಗಳಿಂದ ಉಂಟಾಗಿವೆ. ಈ ಸಂಬಂಧಗಳ ಸ್ವರೂಪ, ಐತಿಹಾಸಿಕ ಹಿನ್ನೆಲೆ, ಪ್ರಸ್ತುತ ಸ್ಥಿತಿ ಮತ್ತು ಸಾಮಾಜಿಕ-ರಾಜಕೀಯ ಪರಿಣಾಮಗಳ ಕುರಿತು ಈ ಲೇಖನ ಬೆಳಕು ಚೆಲ್ಲಲಿದೆ.

### ಭಟ್ಕಳದಲ್ಲಿ ಇರುವ ಪಾಕಿಸ್ತಾನಿಯರೆಷ್ಟು?

- ಪ್ರಸ್ತುತ ಅಂಕಿ ಅಂಶಗಳು (ಏಪ್ರಿಲ್ 2025)
- ಭಾರತದಲ್ಲಿನ ಪಾಕಿಸ್ತಾನಿ ನಾಗರಿಕರು: 92 (88 ಜನರು , 4 ಜನರು ಅಲ್ಪಾವಧಿಯ ವೀಸಾ)
- ಭಟ್ಕಳದಲ್ಲಿ: 14 ಪಾಕಿಸ್ತಾನಿ ನಾಗರಿಕರು (10 ಮಹಿಳೆಯರು, 3 ಮಕ್ಕಳು, 1 ಕಾನೂನುಬಾಹಿರ ಪ್ರವೇಶದ ಪ್ರಕರಣ)
- ಉತ್ತರ ಕನ್ನಡ ಜಿಲ್ಲೆಯಲ್ಲಿ: ಒಟ್ಟು 15 (ಕಾರವಾರದಲ್ಲಿ 1 ಮಹಿಳೆ ಸೇರಿ)



### ಸಾಮಾಜಿಕ-ಆರ್ಥಿಕ ಸಂಬಂಧ

ಗಲ್ಫ್ ವಲಸೆ: ಭಟ್ಕಳದಿಂದ ಸುಮಾರು 5,000 ಕುಟುಂಬಗಳು ದುಬೈ ಸೇರಿ ವಿವಿಧ ಗಲ್ಫ್ ರಾಷ್ಟ್ರಗಳಲ್ಲಿ ನೆಲೆಸಿದ್ದು, ಭಟ್ಕಳ-ಪಾಕಿಸ್ತಾನ ಸಂಬಂಧಗಳನ್ನು ಪರೋಕ್ಷವಾಗಿ ಬೆಳೆಸಿವೆ.

ವ್ಯಾಪಾರ: ನೇರ ವ್ಯಾಪಾರ ಕಡಿಮೆ ಇದ್ದರೂ ಭಟ್ಕಳದ ಮೀನುಗಾರಿಕೆ ಮತ್ತು ಸಣ್ಣ ವ್ಯಾಪಾರಗಳು ಕರಾಚಿಯ ವಾಣಿಜ್ಯ ಮಾದರಿಯನ್ನೇ ಪ್ರತಿಬಿಂಬಿಸುತ್ತವೆ.

### ವೈವಾಹಿಕ ಸಂಬಂಧಗಳು

ಭಟ್ಕಳದ ನವಾಯತ್ ಸಮುದಾಯದವರು ಪಾಕಿಸ್ತಾನದ ಮುಖ್ಯವಾಗಿ ಕರಾಚಿ ಮತ್ತು ಸಿಂಧ್‌ನ ನಿವಾಸಿಗಳೊಂದಿಗೆ ವೈವಾಹಿಕ ಸಂಬಂಧ ಹೊಂದಿದ್ದಾರೆ. ಈ ಸಂಬಂಧಗಳು ಮುಖ್ಯ ವಾಗಿ ಹಿಂದಿನ ತಲೆಮಾರಿನಿಂದ ಕುಟುಂಬಗಳ ತಲೆಮಾರು ಬೆಳೆದಂತೆ ವಿಸ್ತರಿಸಿಕೊಂಡಿವೆ.

### ಸಾಮಾಜಿಕ-ರಾಜಕೀಯ ಪರಿಣಾಮ

ಭದ್ರತಾ ದೃಷ್ಟಿಕೋನ: ಪಾಲ್ಗಾಮ್ ದಾಳಿಯ ನಂತರ ಪಾಕಿಸ್ತಾನಿ ನಾಗರಿಕರ ಹಿನ್ನೆಲೆ ಪರಿಶೀಲನೆ ಮತ್ತು ಚಟುವಟಿಕೆಗಳ ಮೇಲೆ ಹೆಚ್ಚಿನ ಗಮನ ಹರಿಸಲಾಯಿತು.

ಸಾರ್ವಜನಿಕ ಭಾವನೆ: ಸಾಮಾಜಿಕ ಮಾಧ್ಯಮಗಳಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೆಲವರು ಭದ್ರತಾ ಅಪಾಯಗಳ ಬಗ್ಗೆ ಚಿಂತೆ ವ್ಯಕ್ತಪಡಿಸಿದರೆ, ಇತರರು ವೈವಾಹಿಕ ಸಂಬಂಧಗಳ ಮಾನವೀಯತೆಯನ್ನು ಒತ್ತಿಹೇಳುತ್ತಿದ್ದಾರೆ.

### ಇತ್ತೀಚಿನ ಬೆಳವಣಿಗೆಗಳು

ಪಾಲ್ಗಾಮ್ ದಾಳಿ ಪರಿಣಾಮ: ಗೇಟ್ ಪಾಸ್ ನೀಡುವ ನಿರ್ಧಾರ ಕೈಗೆತ್ತಿಕೊಳ್ಳಲ್ಪಟ್ಟರೂ, ಭಟ್ಕಳದ ಮಹಿಳೆಯರ ಮೇಲೆ ಪರಿಣಾಮ ಬೀರುವ ಸಾಧ್ಯತೆ ಕಡಿಮೆಯಿದೆ.

ಸಾರ್ವಜನಿಕರಲ್ಲಿ ಅಪನಂಬಿಕೆ: ಕೆಲವೊಮ್ಮೆ ಭಟ್ಕಳವನ್ನು ಶಂಕಾಸ್ಪದ ಚಟುವಟಿಕೆಯ ಸ್ಥಳವೆಂದು ವಿಶ್ಲೇಷಿಸಲಾಗುತ್ತಿದೆ. ನಿಯಮಿತ ನವೀಕರಣದ ಅವಶ್ಯಕತೆ ಕುಟುಂಬ ಜೀವನಕ್ಕೆ ಅಡ್ಡಿಯಾಗಬಹುದು.

ಭಟ್ಕಳ ಮತ್ತು ಪಾಕಿಸ್ತಾನದ ನಡುವಿನ ಸಂಬಂಧವು ನವಾಯತ್ ಸಮುದಾಯದ ಐತಿಹಾಸಿಕ ಬಾಂಧವ್ಯದ ಪ್ರತೀಕವಾಗಿದೆ. ಇದು ವೈವಾಹಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳ ರೂಪದಲ್ಲಿ ಮುಂದುವರೆದಿದೆ. ಭದ್ರತಾ ಪರಿಸ್ಥಿತಿಗಳ ಬೆಳವಣಿಗೆಯಲ್ಲಿ, ಭಾರತ ಸರ್ಕಾರವು ವೈಯಕ್ತಿಕ ಸಂಬಂಧಗಳ ಮಾನವೀಯತೆ ಮತ್ತು ರಾಷ್ಟ್ರೀಯ ಭದ್ರತೆ ನಡುವಿನ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದೆ.

### ವೀಸಾ ಮತ್ತು ಕಾನೂನು ಸ್ಥಿತಿ

ಭಟ್ಕಳದ ಹೆಚ್ಚಿನ ಪಾಕಿಸ್ತಾನಿ ನಾಗರಿಕರು ದೀರ್ಘಾವಧಿಯ ವೀಸಾ ಹೊಂದಿದ್ದು, ಅವರಿಗೆ ನಿರ್ಬಂಧಿತ ಹಕ್ಕುಗಳು ಮತ್ತು ನಿರ್ದಿಷ್ಟ ಜವಾಬ್ದಾರಿಗಳೊಂದಿಗೆ ವಾಸಿಸಲು ಅನುಮತಿ ಇದೆ. ಪಾಕಿಸ್ತಾನಿ ನಾಗರಿಕರ ಮೇಲಿನ ನಿಯಂತ್ರಣಗಳು ಪಾಲ್ಗಾಮ್ ದಾಳಿಯ ನಂತರ ತೀವ್ರವಾದರೂ ಭಟ್ಕಳದಲ್ಲಿ ವೀಸಾ ಹೊಂದಿರುವವರಿಗೆ ಗಡಿಪಾರು ಆದೇಶ ನೀಡಲಾಗಿಲ್ಲ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248